KAKD030012492024

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ರವರ ನ್ಯಾಯಾಲಯ, ಮಡಿಕೇರಿ.**

ಉಪಸ್ಥಿತರು

**ಶ್ರೀಮತಿ ವಿನುತ ಡಿ.ಎಸ್., ಬಿ.ಎಸ್‌ಸಿ (ಸೆರಿ), ಎಲ್.ಎಲ್.ಬಿ.,**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ಮಡಿಕೇರಿ**

ದಿನಾಂಕ 2ನೇ ಜೂನ್ 2026

**<u>ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 1057/2024</u>**

**ಪಿರ್ಯಾದುದಾರರುಃ** ಕರ್ನಾಟಕ ಸರ್ಕಾರ
ಮಡಿಕೇರಿ ಗ್ರಾಮಾಂತರ ಆರಕ್ಷಕ ಠಾಣೆ
**(ಸ.ಸ.ಅಭಿಯೋಜಕರು)**

ವಿರುದ್ಧ

**ಆರೋಪಿ-** ಮನು ವೈ.ಜಿ.,
ಪ್ರಾಯ 26 ವರ್ಷ,
ತಂದೆಃ ಗಂಗಾಧರ್,
ವಾಸಃ ಯರೆಗೌಡನಹಳ್ಳಿ ಗ್ರಾಮ,
ಪಾಂಡವಪುರ ತಾಲ್ಲೂಕು,
ಮೈಸೂರು ಜಿಲ್ಲೆ.

**(ಆರೋಪಿ ಪರ ಶ್ರೀ ಎಸ್.ಎಂ.ಎಂ., ವಕೀಲರು)**

--ಃ **ತೀರ್ಪು** ಃ-

ಮಡಿಕೇರಿ ಗ್ರಾಮಾಂತರ ಆರಕ್ಷಕ ಉಪನಿರೀಕ್ಷಕರು ಆರೋಪಿಯ ವಿರುದ್ಧ ಇನ್‌ಫಾರ್ಮೇಷನ್ ಮತ್ತು ಟೆಕ್ನಾಲಜಿ ಕಾಯ್ದೆ ಕಲಂ 66(C), 66(D) ಮತ್ತು ಭಾರತೀಯ ದಂಡ ಸಂಹಿತೆ ಕಲಂ 420, 419 ರಡಿಯಲ್ಲಿಯ ಅಪರಾಧಗಳಿಗಾಗಿ ಈ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

2. **<u>ಈ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆಃ</u>**

ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿನ ಕಡಗದಾಳು

ಗ್ರಾಮದಲ್ಲಿ ವಾಸವಿರುವ ಚಾಸಾ-1 ಪ್ರಿಯಂವದಾ ಎಂಬುವವರು ಕಿರ್ಲೋಸ್ಕರ್ ಕಂಪನಿಯ ಜನರೇಟರನ್ನು ಉಪಯೋಗಿಸುತ್ತಿದ್ದು, ಸದರಿ ಜನರೇಟರಿನ ರಿಪೇರಿ ಕೆಲಸವನ್ನು ಕುಶಾಲನಗರದ ಸಾಗರ್ ಎಂಬುವವರು ಮಾಡಿಕೊಡುತ್ತಿದ್ದು, ದಿನಾಂಕಃ04.06.2023 ರಂದು ಸಮಯ ಮಧ್ಯಾಹ್ನ 12.00 ಗಂಟೆಗೆ 7483346964 ರ ಮೊಬೈಲಿನಿಂದ ಚಾಸಾ-1 ರವರ ಮೊಬೈಲ್ ಸಂಖ್ಯೆಃ9900164670 ನಂಬರಿಗೆ ಸಾಗರ್ ಎಂಬುದಾಗಿ ಬೇರೆಯವರಂತೆ ನಟಿಸಿ ಆರೋಪಿಯು ಮಾತನಾಡಿ ಚಾಸಾ-1 ರವರೊಂದಿಗೆ “ನಿಮಗೆ ಬೇಕಾದ ಜನರೇಟರ್ ನನ್ನಲ್ಲಿಯೇ ಇದೆ. ಅದನ್ನು ನಿಮಗೆ ಕೊಟ್ಟು 3 ಕೆವಿ ಜನರೇಟನ್ನು ತಾನು ತೆಗೆದುಕೊಂಡು ಹೋಗುತ್ತೇನೆ" ಎಂದು ಹೇಳಿ, ಮೋಸದಿಂದ ರೂ.22,000/-ಗಳನ್ನು ಆರೋಪಿಯು ನೀಡುವ ನಂಬರಿಗೆ ಗೂಗಲ್ ಪೇ ಮಾಡಿ ಎಂಬುದಾಗಿ ತಿಳಿಸಿದ ಮೇರೆಗೆ ಚಾಸಾ-1 ರವರು ಲಕ್ಷ್ಮೀಆಚಾರ್ಯ ಎಂಬ ಹೆಸರಿಗೆ ಹಣವನ್ನು ಗೂಗಲ್ ಪೇ ಮಾಡಿದ್ದು ಆರೋಪಿಯು ಸಾಮಾಜಿಕ ಜಾಲತಾಣದ ಮಾಹಿತಿ ತಂತ್ರಜ್ಞಾನವನ್ನು ಉಪಯೋಗಿಸಿ ಬೇರೆಯವರಂತೆ ನಟಿಸಿ ಮಾತನಾಡಿ ವಂಚನೆ ಮಾಡಿರುತ್ತಾರೆ ಎಂದು ಆಪಾದಿಸಲಾಗಿದೆ.

3. ಚಾಸಾ-1 ರವರು ಸಲ್ಲಿಸಿರುವ ದೂರಿನ ಆಧಾರದಲ್ಲಿ ಮಡಿಕೇರಿ ಗ್ರಾಮಾಂತರ ಆರಕ್ಷಕ ಠಾಣೆ ಗುನ್ನ ನಂ.84/2029 ರಲ್ಲಿ ಇನ್‌ಫಾರ್ಮೇಷನ್ ಮತ್ತು ಟೆಕ್ನಾಲಜಿ ಕಾಯ್ದೆ ಕಲಂ 66(C), 66(D) ಮತ್ತು ಭಾರತೀಯ ದಂಡ ಸಂಹಿತೆ ಕಲಂ 419, 420, ರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತಾರೆ.

4. ತನಿಖಾಧಿಕಾರಿಯು ಆರೋಪಿಯ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ. ಆರೋಪಿಯು ತಮ್ಮ ವಕೀಲರ ಮೂಲಕ ಹಾಜರಾಗಿ ಜಾಮೀನು ಅರ್ಜಿಯನ್ನು ಸಲ್ಲಿಸಿ ಜಾಮಿನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ಅಭಿಯೋಜನೆಯ ಎಲ್ಲಾ ದಸ್ತಾವೇಜುಗಳನ್ನು ಬಿ.ಎನ್.ಎಸ್.ಎಸ್. ಕಲಂ 230 ರ ಅನುಸಾರ ಒದಗಿಸಲಾಗಿದೆ. ವಾದ ವಿವಾದವನ್ನು ಕೇಳಿ ಆರೋಪಿಯ ವಿರುದ್ದ ಇನ್‌ಫಾರ್ಮೇಷನ್ ಮತ್ತು ಟೆಕ್ನಾಲಜಿ ಕಾಯ್ದೆ ಕಲಂ 66(C), 66(D) ಮತ್ತು ಭಾರತೀಯ ದಂಡ ಸಂಹಿತೆ ಕಲಂ 419, 420 ರಡಿಯಲ್ಲಿನ ಶಿಕ್ಷಾರ್ಹ ಅಪರಾಧಕ್ಕಾಗಿ ಆರೋಪಣೆಯನ್ನು ಸಿದ್ಧಪಡಿಸಿ ಅವರಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಕೇಳಲಾಗಿ ಅವರು ಆರೋಪಣೆಯನ್ನು ಅಲ್ಲಗಳೆದಿರುತ್ತಾರೆ. ನ್ಯಾಯಾಲಯವು ಅಭಿಯೋಜನೆಯ ಸಾಕ್ಷಿದಾರರ ವಿಚಾರಣೆಗಾಗಿ ಸಮನ್ಸನ್ನು ಹೊರಡಿಸಿರುತ್ತದೆ.

5. ಅಭಿಯೋಜನೆಯು ತನ್ನ ಪ್ರಕರಣವನ್ನು ಸಾಬೀತುಪಡಿಸಲು, ಈ ಪ್ರಕರಣದ ದೂರುದಾರರಾದ ಚಾಸಾ-1 ರವರನ್ನು ಪ್ರಾಸಾ-1 ಎಂದು ವಿಚಾರಣೆ ಮಾಡಿದ್ದು, ನಿಪಿ-1 ರ ದಾಖಲೆಯನ್ನು ಗುರುತಿಸಿಕೊಂಡಿರುತ್ತಾರೆ. ಪ್ರಾಸಾ-1 ರವರು

ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ ನ್ಯಾಯಾಲಯವು ಉಳಿದ ಸಾಕ್ಷಿಗಳ ವಿಚಾರಣೆಯನ್ನು ಮಾಡಿದರೆ ಅಭಿಯೋಜನೆಗೆ ಯಾವುದೇ ರೀತಿಯ ಸಹಾಯವಾಗುವುದಿಲ್ಲ ಎಂದು ಪರಿಗಣಿಸಿ ಹಾಗೂ ನ್ಯಾಯಾಲಯದ ಸಮಯವನ್ನು ಉಳಿಸುವುದಕೋಸ್ಕರ ಉಳಿದ ಸಾಕ್ಷಿಗಳನ್ನು ವಿಚಾರಣೆಯಿಂದ ಕೈಬಿಡಲಾಗಿದೆ.

6. ನ್ಯಾಯಾಲಯವು ಕಡತವನ್ನು ಪರಿಶೀಲಿಸಿದಾಗ ಆರೋಪಿಯ ವಿರುದ್ಧ ಯಾವುದೇ ಸೂಕ್ತವಾದ ಪ್ರಚೋದನಕಾರಿ ಸಾಕ್ಷ್ಯಾಧಾರಗಳು ಇಲ್ಲದೇ ಇರುವುದರಿಂದ ಬಿ.ಎನ್.ಎಸ್.ಎಸ್. ಕಲಂ 351 ರಡಿಯಲ್ಲಿ ಆರೋಪಿಯ ಹೇಳಿಕೆ ಪಡೆದುಕೊಳ್ಳುವುದನ್ನು ಕೈ ಬಿಡಲಾಗಿದೆ.

7. ಈ ಮೇಲೆ ಹೇಳಿದ ಪ್ರಕರಣದ ವಸ್ತುಸ್ಥಿತಿಯ ಆಧಾರದ ಮೇಲೆ ನ್ಯಾಯಾಲಯವು ಈ ಕೆಳಕಂಡ ಅಂಶಗಳನ್ನು ನಿರ್ಧರಿಸಬೇಕಾಗಿರುತ್ತದೆ.

1. ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿನ ಕಡಗದಾಳು ಗ್ರಾಮದಲ್ಲಿ ವಾಸವಿರುವ ಚಾಸಾ-1 ಪ್ರಿಯಂವದಾ ಎಂಬುವವರು ಕಿರ್ಲೋಸ್ಕರ್ ಕಂಪನಿಯ ಜನರೇಟರನ್ನು ಉಪಯೋಗಿಸುತ್ತಿದ್ದು, ಸದರಿ ಜನರೇಟರಿನ ರಿಪೇರಿ ಕೆಲಸವನ್ನು ಕುಶಾಲನಗರದ ಸಾಗರ್ ಎಂಬುವವರು ಮಾಡಿಕೊಡುತ್ತಿದ್ದು, ದಿನಾಂಕಃ 04.06.2023 ರಂದು ಸಮಯ ಮಧ್ಯಾಹ್ನ 12.00 ಗಂಟೆಗೆ 7483346964 ರ ಮೊಬೈಲಿನಿಂದ ಚಾಸಾ-1 ರವರ ಮೊಬೈಲ್ ಸಂಖ್ಯೆಃ9900164670 ನಂಬರಿಗೆ ಸಾಗರ್ ಎಂಬುದಾಗಿ ಆರೋಪಿಯು ಬೇರೆಯವರಂತೆ ನಟಿಸಿ ಮಾತನಾಡಿದ್ದು, ಆ ಮೂಲಕ ಆರೋಪಿಯು ಕಲಂ 419 ಭಾ.ದಂ.ಸಂ. ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯು ನಿಸ್ಸಂಶಯವಾಗಿ ಸಾಬೀತುಪಡಿಸುವುದೇ?

2. ಅದೇ ದಿನ, ಅದೇ ಸಮಯ ದಲ್ಲಿ ಮೇಲ್ಕಂಡ ಕೃತ್ಯವನ್ನು ಮುಂದುವರೆಸುತ್ತಾ, ಆರೋಪಿಯು ಚಾಸಾ-1 ರವರನ್ನು ಉದ್ದೇಶಿಸಿ, “ನಿಮಗೆ ಬೇಕಾದ ಜನರೇಟರ್ ನನ್ನಲ್ಲಿಯೇ ಇದೆ. ಅದನ್ನು ನಿಮಗೆ ಕೊಟ್ಟು 3 ಕೆವಿ ಜನರೇಟನ್ನು ತಾನು ತೆಗೆದುಕೊಂಡು ಹೋಗುತ್ತೇನೆ" ಎಂದು ಹೇಳಿ, ಮೋಸದಿಂದ ರೂ.22,000/- ಗಳನ್ನು ಆರೋಪಿಯು ನೀಡುವ ನಂಬರಿಗೆ ಗೂಗಲ್ ಪೇ ಮಾಡಿ ಎಂಬುದಾಗಿ ತಿಳಿಸಿದ ಮೇರೆಗೆ ಚಾಸಾ-1 ರವರು ಲಕ್ಷ್ಮೀಆಚಾರ್ಯ ಎಂಬ ಹೆಸರಿಗೆ ಹಣವನ್ನು ಗೂಗಲ್

ಪೇ ಮಾಡಿದ್ದು, ಆ ಮೂಲಕ ಆರೋಪಿಯು ಚಾಸಾ-1 ರವರನ್ನು ವಂಚನೆ ಮಾಡಿ ಕಲಂ 420 ಭಾ.ದಂ.ಸಂ. ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯು ನಿಸ್ಸಂಶಯವಾಗಿ ಸಾಬೀತುಪಡಿಸುವುದೇ?

3. ಅದೇ ದಿನ, ಅದೇ ಸಮಯದಲ್ಲಿ ಮೇಲ್ಕಂಡ ಕೃತ್ಯವನ್ನು ಮುಂದುವರೆಸುತ್ತಾ, ಚಾಸಾ-1 ರವರು ಮಹಿಳೆಯಾಗಿದ್ದು ಅವರನ್ನು ಸಾಮಾಜಿಕ ಜಾಲತಾಣದ ಮಾಹಿತಿ ತಂತ್ರಜ್ಞಾನವನ್ನು ಉಪಯೋಗಿಸಿ ವಂಚನೆ ಮಾಡಿದ್ದು, ಆ ಮೂಲಕ ಆರೋಪಿಯು ಕಲಂ 66(ಸಿ) ಐ.ಟಿ ಆಕ್ಟ್ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯು ನಿಸ್ಸಂಶಯವಾಗಿ ಸಾಬೀತುಪಡಿಸುವುದೇ?

4. ಅದೇ ದಿನ, ಅದೇ ಸಮಯದಲ್ಲಿ ಮೇಲ್ಕಂಡ ಕೃತ್ಯವನ್ನು ಮುಂದುವರೆಸುತ್ತಾ, ಆರೋಪಿಯು ಚಾಸಾ-1 ರವರಿಗೆ ಜನರೇಟನ್ನು ಸರಬರಾಜು ಮಾಡುವಂತೆ ನಂಬಿಸಿ ಮೋಸದಿಂದ ರೂ.22,000/- ಗಳನ್ನು ಲಕ್ಷ್ಮೀಆಚಾರ್ಯ ಎಂಬ ಹೆಸರಿಗೆ ಚಾಸಾ-1 ರವರಿಂದ ಮೋಸದಿಂದ ಗೂಗಲ್ ಪೇ ಮಾಡಿಸಿಕೊಂಡು ಚಾಸಾ-1 ರವರನ್ನು ಸಾಮಾಜಿಕ ಜಾಲತಾಣದ ಮಾಹಿತಿ ತಂತ್ರಜ್ಞಾನವನ್ನು ಉಪಯೋಗಿಸಿ ಬೇರೆಯವರಂತೆ ನಟಿಸಿ ಮಾತನಾಡಿ ವಂಚನೆ ಮಾಡಿದ್ದು, ಆ ಮೂಲಕ ಆರೋಪಿಯು ಕಲಂ 66(ಡಿ) ಐ.ಟಿ ಆಕ್ಟ್ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯು ನಿಸ್ಸಂಶಯವಾಗಿ ಸಾಬೀತುಪಡಿಸುವುದೇ?

5. ಯಾವ ಆದೇಶ?

8. ಮೇಲ್ಕಂಡ ಅಂಶಗಳಿಗೆ ಈ ಕೆಳಗೆ ಕಾಣಿಸಿದ ನನ್ನ ಉತ್ತರ ಈ ಕೆಳಗಿನಂತಿರುತ್ತದೆ.

ಅಂಶ-1: ನಕಾರಾತ್ಮಕವಾಗಿ,
ಅಂಶ-2: ನಕಾರಾತ್ಮಕವಾಗಿ,
ಅಂಶ-3: ನಕಾರಾತ್ಮಕವಾಗಿ,

ಅಂಶ-4: ನಕಾರಾತ್ಮಕವಾಗಿ,
ಅಂಶ-5: ಅಂತಿಮ ಆದೇಶದಂತೆ
ಕೆಳಕಂಡ ಕಾರಣಗಳ ಪ್ರಕಾರ

## ಕಾರಣಗಳು

9. **ಅಂಶ-1 ರಿಂದ 4-** ಸಾಕ್ಷ್ಯ ಹಾಗೂ ಕಾರಣಗಳ ಪುನರಾವರ್ತನೆಯನ್ನು ತಡೆಯುವುದಕೋಸ್ಕರ ಈ ಮೇಲಿನ ಅಂಶಗಳನ್ನು ನ್ಯಾಯಾಲಯವು ಒಟ್ಟಿಗೆ ಚರ್ಚಿಸಿರುತ್ತದೆ. ಅಭಿಯೋಜನೆಯು ಈ ಪ್ರಕರಣದ ಫಿರ್ಯಾದುದಾರರಾದ ಚಾಸಾ-1 ಪ್ರಿಯಂವದಾ ರವರನ್ನು ಪ್ರಾಸಾ-1ರನ್ನಾಗಿ ವಿಚಾರಣೆ ಮಾಡಿರುತ್ತಾರೆ. ಪ್ರಾಸಾ-1 ತಮ್ಮ ಸಾಕ್ಷ್ಯದಲ್ಲಿ ಚಾಸಾ-2 ರಿಂದ 7 ತನಗೆ ಗೊತ್ತು , ಆರೋಪಿ ಗೊತ್ತು, ಈಗ್ಗೆ ಸುಮಾರು 3 ವರ್ಷಗಳ ಹಿಂದೆ ತಮ್ಮ ಮನೆಯಲ್ಲಿ ಕಿರ್ಲೋಸ್ಕ ರ್ ಕಂಪನಿಯ ಜನರೇಟರನ್ನು ಬದಲಾಯಿಸಿ ಕೊಡುವ ವ್ಯವಹಾರದ ವಿಚಾರವಾಗಿ ಆರೋಪಿಗೂ ಮತ್ತು ತನಗೂ ಹಣದ ವ್ಯವಹಾರದಲ್ಲಿ ಮಾತುಕತೆ ಆಗಿದ್ದು, ಅದನ್ನು ಬಗೆಹರಿಸಿಕೊಳ್ಳಲು ತಾವು ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ಒಂದು ದಾಖಲೆಗೆ ತನ್ನ ಸಹಿ ಪಡೆದಿದ್ದು, ಇದರ ಹೊರತಾಗಿ ಆರೋಪಿ ತನಗೆ ವ್ಯಾವಹಾರಿಕವಾಗಿ ಮೋಸ ಮಾಡಿಲ್ಲ, ಬೇರೆಯವರ ಹೆಸರು ಹೇಳಿ ತನಗೆ ದೂರವಾಣಿ ಕರೆ ಮಾಡಿ ನನ್ನಿಂದ ಹಣ ಪಡೆದುಕೊಂಡಿಲ್ಲ, ನಿಪಿ-1 ರಲ್ಲಿ ಬರೆದಿರುವ ವಿಚಾರ ತನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಪ್ರಾಸಾ-1 ರವರು ದೂರನ್ನು ನಿಪಿ-1 ಎಂದು ಹಾಗೂ ಸದರಿ ದಾಖಲೆಯಲ್ಲಿ ಅವರ ಸಹಿಯ ನೋಡಿ ಗುರುತಿಸಿರುತ್ತಾರೆ.

10. ಪ್ರಾಸಾ-1 ರವರು ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಸರ್ಕಾರಿ ವಕೀಲರು ನ್ಯಾಯಾಲಯದ ಅನುಮತಿ ಮೇರೆಗೆ ಪ್ರಾಸಾ-1 ರವರನ್ನು ಅಭಿಯೋಜಕರು ಪಾಟೀ ಸವಾಲಿಗೊಳಪಡಿಸಿದ್ದು ಸದರಿ ಪಾಟೀ ಸವಾಲಿನಲ್ಲಿಯೂ ಸಹ ಪ್ರಾಸಾ-1ರವರು ಆರೋಪಿಯ ವಿರುದ್ಧ ಯಾವುದೇ ಪ್ರಚೋದನಕಾರಿ ಸಾಕ್ಷ್ಯ ನುಡಿದಿರುವುದಿಲ್ಲ, ಸರ್ಕಾರಿ ಅಭಿಯೋಜಕರು ಕೇಳಿದ ಎಲ್ಲಾ ಪ್ರಶ್ನೆಗಳನ್ನು ಅಲ್ಲಗೆಳೆದಿರುತ್ತಾರೆ. ಪ್ರಾಸಾ-1ರವರು ಮತ್ತು ಆರೋಪಿ ರಾಜಿ ಆಗಿರುವುದಾಗಿ ಒಪ್ಪಿರುತ್ತಾರೆ.

11. ನ್ಯಾಯಾಲಯವು ಪ್ರಾಸಾ-1ರವರ ಸಂಪೂರ್ಣ ಸಾಕ್ಷ್ಯವನ್ನು ಪರಿಗಣಿಸಿ ನೋಡಿದಾಗ ಅಭಿಯೋಜನೆಯು ಆರೋಪಿಯ ವಿರುದ್ಧ ಮಾಡಿದ

ಆರೋಪಣೆಯನ್ನು ಸಾಬೀತುಪಡಿಸಲು ಸಂಪೂರ್ಣವಾಗಿ ವಿಫಲವಾಗಿರುತ್ತದೆ ಹಾಗೂ ಪ್ರಾಸಾ-1ರವರು ಆರೋಪಿಯ ವಿರುದ್ಧ ಯಾವುದೇ ಸಾಕ್ಷ್ಯವನ್ನು ನುಡಿಯದೇ ಇರುವುದರಿಂದ ಅಭಿಯೋಜನೆಯು ಇನ್‌ಫಾರ್ಮೇಷನ್ ಮತ್ತು ಟೆಕ್ನಾಲಜಿ ಕಾಯ್ದೆ ಕಲಂ 66(B), 66(C), 66(D) ಮತ್ತು ಭಾರತೀಯ ದಂಡ ಸಂಹಿತೆ ಕಲಂ 420, 419 ಘಟಕಾಂಶಗಳನ್ನು ಸಾಬೀತುಪಡಿಸುವಲ್ಲಿ ವಿಫಲವಾಗಿರುತ್ತದೆ. ಈಗ ನ್ಯಾಯಾಲಯದ ಮುಂದಿರುವ ಆರೋಪಿ ಅಪರಾಧ ಮಾಡಿದ್ದಾರೆಂದು ಹೇಳುವಷ್ಟರ ಮಟ್ಟಿಗೆ ಯಾವುದೇ ಸಾಕ್ಷ್ಯಾಧಾರ ಇಲ್ಲದಿರುವುದರಿಂದ ಈ ನ್ಯಾಯಾಲಯವು ಮೇಲೆ ಹೇಳಿದ ಅಂಶಗಳನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತದೆ.

12. **ಅಂಶಃ5** - ಮೇಲೆ ಹೇಳಿದ ವಸ್ತುಸ್ಥಿತಿ ಹಾಗೂ ಕಾರಣಗಳ ಆಧಾರದ ಮೇಲೆ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -ಃ**ಆದೇಶ**ಃ-

ಬಿ.ಎನ್.ಎಸ್.ಎಸ್. ಕಲಂ 278(1) ರನ್ವಯ ಆರೋಪಿಯನ್ನು ಇನ್‌ಫಾರ್ಮೇಷನ್ ಮತ್ತು ಟೆಕ್ನಾಲಜಿ ಕಾಯ್ದೆ ಕಲಂ 66(B), 66© ಮತ್ತು ಭಾರತೀಯ ದಂಡ ಸಂಹಿತೆ ಕಲಂ 419, 420 ರಡಿಯಲ್ಲಿ ಶಿಕ್ಷಿಸಬಹುದಾದ ಅಪರಾಧಗಳಿಂದ ನಿರ್ದೋಷಿ ಎಂದು ಪರಿಗಣಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿ ಹಾಗೂ ಜಾಮೀನುದಾರರ ಜಾಮೀನು ಮುಚ್ಚಳಿಕೆಯನ್ನು ರದ್ದುಪಡಿಸಲಾಗಿದೆ.

(ಶೀಘ್ರಲಿಪಿಗಾರರಿಗೆ ನೇರ ಉಕ್ತಲೇಖನ ನೀಡಿದ್ದು, ಆಕೆಯು ಗಣಕಯತ್ರದಲ್ಲಿ ಬೆರಳಚ್ಚು ಮಾಡಿದ್ದು, ತಪ್ಪುಗಳನ್ನು ತಿದ್ದುಪಡಿ ಮಾಡಿದ ನಂತರ **ದಿನಾಂಕ 2ನೇ ಜೂನ್ 2026** ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.)

ಸಹಿ/-
(**ವಿನುತ ಡಿ.ಎಸ್.**)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕ
ದಂಡಾಧಿಕಾರಿಗಳು, ಮಡಿಕೇರಿ.

**--ಃ ಅನುಬಂಧ ಃ--**

**ಅಭಿಯೋಜನೆ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿಃ-**

ಪ್ರಾಸಾ-1 ಪ್ರಿಯಂವದಾ

**ಅಭಿಯೋಜನೆ ಪರ ಗುರುತು ಮಾಡಲ್ಪಟ್ಟ ನಿಶಾನೆಗಳುಃ-**

ನಿಪಿ-1 ದೂರು

ನಿಪಿ-1(ಎ) ಪ್ರಾಸಾ-1 ರವರ ಸಹಿ

**ಅಭಿಯೋಜನೆ ಪರ ಗುರುತು ಮಾಡಲ್ಪಟ್ಟ ಮುದ್ದೆ ಮಾಲುಗಳುಃ-**

-ಇಲ್ಲ-

**ಆರೋಪಿಯ ಪರ ವಿಚಾರಣೆಯಾದ ಸಾಕ್ಷಿಗಳುಃ-**

-ಇಲ್ಲ-

**ಆರೋಪಿಯ ಪರ ಗುರುತು ಮಾಡಲ್ಪಟ್ಟ ನಿಶಾನೆಗಳುಃ-**

-ಇಲ್ಲ-

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,

ಮಡಿಕೇರಿ.